ಶ್ರೀ ಆರ್. ಎಲ್. ಜಾಲಪ್ಪ.—ಈ ಸಹಕಾರ ಸಂಘದ ಹಣದ ದುರುಪಯೋಗದ ಬಗ್ಗೆ ವರದಿ ಬಂದಿಲ್ಲ. ಈಗ ಬಂದಿರುವುದು ಏನೆಂದರೆ ನಮ್ಮ ಇಲಾಖೆ ಒಪ್ಪಿಗೆ ಪಡೆಯದೆ ಸಂಬಳ ಜಾಸ್ತಿ ಕೊಡುತ್ತಿದ್ದಾರೆ, ಜೀಪಿಗೆ ಹಣ ಖರ್ಚು ಮಾಡಿದ್ದಕ್ಕೆ ಪರ್‌ಮಿಷನ್ ತೆಗೆದುಕೊಂಡಿಲ್ಲ, ರೆಕವರಿ ಖರ್ಚು ಜಾಸ್ತಿಯಾಗಿದೆ, ಮತ್ತು ಲೆಡ್ಜರ್ ಸರಿಯಾಗಿ ಮೈನ್‌ಟೈನ್ ಮಾಡಿಲ್ಲ ಎಂದು 1-5-82ರಲ್ಲಿ ಆಲ್ಲಿನ ಡೆಪ್ಯುಟಿ ರಿಜಿಸ್ಟ್ರಾರ್ ಈ ಸಂಘವನ್ನು ಸೂಪರ್‌ಸೀಡ್ ಮಾಡಬೇಕೆಂದು ಜಾಯಿಂಟ್ ರಿಜಿಸ್ಟ್ರಾರ್‌ಗೆ ರಿಪೋರ್ಟ್ ಕಳುಹಿಸಿದ್ದಾರೆ. ಅದನ್ನು ಜಾಯಿಂಟ್ ರಿಜಿಸ್ಟ್ರಾರ್ ಅವರು ವಾಪಸ್ಸು ಕಳುಹಿಸಿ 1983-84ರಲ್ಲಿ ಇದೇ ರೀತಿ ಮುಂದುವರಿದರೆ ಆಗ ಸೂಪರ್‌ಸೀಡ್ ಮಾಡಲಿಕ್ಕೆ ಯೋಚನೆ ಮಾಡಬೇಕೆಂದು ವಾಪಸ್ಸು ಕಳುಹಿಸಿದ್ದಾರೆ. ಈಗ ಆಡಿಟ್ ನಡೆಯುತ್ತಿದ್ದು ಇನ್ನು 15 ದಿವಸಗಳಲ್ಲಿ ಆಡಿಟ್ ಮುಗಿದು ರಿಪೋರ್ಟ್ ಬರಬಹುದು. ಅದು ಬಂದಮೇಲೆ ಸೂಕ್ತ ವ್ಯವಸ್ಥೆ ಮಾಡುತ್ತೇವೆ.

ವಿಷಯ.—ಹಟ್ಟಿಗಳನ್ನು ಹಳ್ಳಿಗಳನ್ನಾಗಿ ಮಾರ್ಪಡಿಸುವ ಬಗ್ಗೆ

ಪ್ರ. ಸಂಖ್ಯೆ 79 (91) ಶ್ರೀ ಬಿ. ಹೆಚ್. ಯಂಕಾನಾಯ್ಕ (ಹರಪನಹಳ್ಳಿ).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಕಂದಾಯ ಮಂತ್ರಿಗಳು ಹಾಗೂ ಯೋಜನಾ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಹರಿಜನ, ಗಿರಿಜನರ ಮತ್ತು ಹಿಂದುಳಿದ ಜನಾಂಗದವರ ಹಳ್ಳಿಗಳು ಇನ್ನು ಮಜುರೆ ಹಳ್ಳಿಗಳಾಗಿ ಮುಂದುವರಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಕರ್ನಾಟಕ ರಾಜ್ಯಾದ್ಯಾಂತ ಹಟ್ಟಿ ಹರಿಜನರ ಕೇರಿ ತಾಂಡ ಇವುಗಳನ್ನು ಕಂದಾಯ ಗ್ರಾಮವಾಗಿ ಪರಿವರ್ತಿಸಲು ಕ್ರಮ ಕೈಗೊಳ್ಳಲಾಗುವುದೇ ;

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನ ಮಂತ್ರಿಗಳು).—

ಅ) ಹೌದು ಹಟ್ಟಿಗಳನ್ನು ಹಳ್ಳಿಗಳನ್ನಾಗಿ ಪರಿವರ್ತಿಸಲು ಕೆಲವು ಬೇಡಿಕೆಗಳು ಬಂದಿವೆ.

ಆ) ಪ್ರತಿಯೊಂದು ಪ್ರಕರಣವನ್ನು ಅರ್ಹತೆಯ ಆಧಾರದ ಮೇಲೆ ಪರಿಗಣಿಸಲಾಗುವುದು.

ಶ್ರೀ ಬಿ. ಹೆಚ್. ಯಂಕಾನಾಯಕ್.—ಸ್ವಾತಂತ್ರ್ಯ ಬಂದು 38 ವರ್ಷಗಳಾಗಿವೆ. ಇದುವರೆಗೂ ಹಟ್ಟಿ ಮತ್ತು ತಾಂಡಗಳನ್ನು ಗ್ರಾಮಗನ್ನಾಗಿ ಮಾಡಿಲ್ಲ. ಇವುಗಳನ್ನು ಯಾವಾಗ ರೆವಿನ್ಯೂ ಗ್ರಾಮಗಳಾಗಿ ಪರಿವರ್ತಿಸುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಕೆಲವು ತಾಂಡಗಳು, ಹಟ್ಟಿಗಳು ರೆವಿನ್ಯೂ ಗ್ರಾಮದಿಂದ ಬಹಳ ದೂರ ಇವೆ. ಅವೆಲವನ್ನೂ ರೆವಿನ್ಯೂ ಗ್ರಾಮಗಳಾಗಿ ಮಾರ್ಪಾಡು ಮಾಡತಕ್ಕದ್ದು ಅವಶ್ಯ ಇದೆ ಈಗ ಆ ಬಗ್ಗೆ ಬಂದಿರತಕ್ಕ ಅರ್ಜಿಗಳನ್ನು ಪರಿಶೀಲನೆ ಮಾಡಲಿಕ್ಕೆ ಹೇಳಿದ್ದೇವೆ. ಜಾಹಿರು ಮಾಡಿದಾಗ ಅರ್ಜಿ ಬರದೇ ಹೋಗಿದ್ದರೂ ಸರ್ಕಾರ ಇಂತಹ ತಾಂಡ, ಹಟ್ಟಿಗಳನ್ನು ಹಳ್ಳಿಗಳನ್ನಾಗಿ ಮಾರ್ಪಾಡು ಮಾಡತಕ್ಕ ಕ್ರಮ ಕೈಗೊಳ್ಳತ್ತೇವೆ.

ಶ್ರೀ ಬಿ. ಹೆಚ್. ಯಂಕಾನಾಯಕ್.—38 ವರ್ಷಗಳ ಹಿಂದೆ ಇಂಗ್ಲಿಷ್‌ನವರ ಕಾಲದಲ್ಲಿ ಯಾವ ರೀತಿ ಈ ತಾಂಡಗಳು ಇದ್ದವು, ಈಗಲೂ ಅದೇ ರೀತಿಯಲ್ಲಿವೆ. ಈ ತಾಂಡಗಳನ್ನು, ಮತ್ತು ಹಟ್ಟಿಗಳನ್ನು ರೆವಿನ್ಯೂ ಗ್ರಾಮಗಳಾಗಿ ಮಾರ್ಪಾಡು ಮಾಡಲಿಕ್ಕೆ ಬೇಡಿಕೆಗಳು ಬಂದಿರುವ ಬಗ್ಗೆ ಸರ್ಕಾರ ಈವರೆಗೆ ಏನು ಕ್ರಮ ಕೈಗೊಂಡಿದೆ ? ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ;

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ, ಸರ್ಕಾರ ಈಗಾಗಲೇ ಇದರ ಬಗ್ಗೆ ಕ್ರಮ ಕೈಗೊಂಡು ಸರ್ವೆ ಮಾಡಿಸುತ್ತಿದೆ. ಆದಷ್ಟು ಬೇಗ ಹಟ್ಟಿ ಮತ್ತು ತಾಂಡಗಳನ್ನು ಹಳ್ಳಿಗಳನ್ನಾಗಿ ಪರಿವರ್ತನೆ ಮಾಡುವ ಕ್ರಮವನ್ನು ಸರ್ಕಾರ ಕೈಗೊಳ್ಳುತ್ತದೆ.

ವಿಷಯ : ಧಾರವಾಡ ಜಿಲ್ಲೆಯಲ್ಲಿ ಅಭಾವ ಪರಿಹಾರ ಕಾಮಗಾರಿಗಳು.

ಪ್ರ. ಸಂಖ್ಯೆ 80 (99) ಶ್ರೀ ಕೆ. ಹೆಚ್. ಪಾಟೀಲ್ (ಗದಗ್).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಕಂದಾಯ ಹಾಗೂ ಯೋಜನಾ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) 1984-85ರಲ್ಲಿ ಧಾರವಾಡ ಜಿಲ್ಲೆಯಲ್ಲಿ ಕೈಗೊಂಡ ಬರಗಾಲ ಪರಿಹಾರ ಕಾಮಗಾರಿಗಳಿಗಾಗಿಯೇ ಹಾಗೂ ಖರ್ಚು ಮಾಡಿದ ಹಣ ಎಷ್ಟು ;

ಆ) 23-11-84ರಲ್ಲಿ ಕೇಂದ್ರ ಸರ್ಕಾರವು 32.73 ಲಕ್ಷ ಸಹಾಯಧನವನ್ನು ಮಂಜೂರು ಮಾಡಿರುವುದು ನಿಜವೇ ?

ಇ) ಈ ಹಣವನ್ನು ಎಷ್ಟು ಕಾಮಗಾರಿಗಳಿಗಾಗಿ ಉಪಯೋಗಿಸಿಕೊಳ್ಳಲಾಗಿದೆ. (ವಿವರಗಳನ್ನು ದಯಮಾಡಿ ತಿಳಿಸುವುದು) ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) 1984-85ರಲ್ಲಿ 1182 ಕೆಲಸಗಳನ್ನು 812.29 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಹಾಗೂ 1985-86ನೇ ಸಾಲಿನಲ್ಲಿ 1230 ಪರಿಹಾರ ಕಾಮಗಾರಿಗಳನ್ನು 165.34 ಲಕ್ಷ ರೂ.ಗಳ ಖರ್ಚಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ಕೈಕೊಳ್ಳಲಾಗಿದೆ.

ಆ) 1985ನೇ ಸಾಲಿಗೆ ಕೇಂದ್ರ ಸರ್ಕಾರವು ಅಭಾವಾ ಪರಿಹಾರ ಕಾಮಗಾರಿಗಳಿಗೆ ಖರ್ಚನ್ನು ಮಿತಿಗೊಳಿಸಿ 32.73 ಕೋಟಿ ಸಹಾಯಧನವನ್ನು ಮಂಜೂರು ಮಾಡಿದೆ.

ಇ) 1984-85ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು 32.73 ಕೋಟಿ ರೂ.ಗಳ ವೆಚ್ಚ ಮಿತಿಯನ್ನು ಮಾತ್ರ ಅನುಮೋದಿಸಿದ್ದರೂ ರಾಜ್ಯ ಸರ್ಕಾರವು 39.87 ಕೋಟಿ ರೂ.ಗಳನ್ನು ಉದ್ಯೋಗ ನಿರ್ಮಾಣ ಕ್ಕಾಗಿ ಮತ್ತು ಕೆಳಕಂಡ ಪರಿಹಾರ ಕಾರ್ಯಗಳಿಗಾಗಿ ಅಭಾವ ಪರಿಹಾರ ಲೆಕ್ಕ ಶೀರ್ಷಿಕೆಯಡಿಯಲ್ಲಿಯೇ ಖರ್ಚುಮಾಡಿದೆ.

1) ಕುಡಿಯುವ ನೀರಿನ ಸಾಗಾಣಿಕೆ	....	69.76 ಲಕ್ಷ
2) ಮೇವು ಸರಬರಾಜು	....	30.34 ,,
3) ಗ್ರಾಮೀಣ ನೀರು ಪೂರೈಕೆ	....	1396.70 ,,
4) ನಗರ ನೀರು ಪೂರೈಕೆ	....	139.00 ,,
5) ಮೇವು ಪೂರೈಕೆ ಮತ್ತು ಪಶು ವೈದ್ಯಕೀಯ ರಕ್ಷಣೆ	....	97.00 ,,
6) ಜನಾರೋಗ್ಯ	....	48.13 ,,
7) ವಿಶೇಷ ಪೌಷ್ಟಿಕ ಆಹಾರ	....	50.56 ,,
8) ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕೃಷಿ ಪರಿಕರಗಳ ನೀಡಿಕೆಗಾಗಿ	....	160.06 ,,
9) ಕೃಷಿ ರಕ್ಷಣೆ ಯೋಜನೆ	....	49.64 ,,
10) ಉದ್ಯೋಗ ನಿರ್ಮಾಣ ಕೆಲಸಗಳು	....	1946.42 ,,

ಉದ್ಯೋಗ ನಿರ್ಮಾಣ ಕೆಲಸಗಳ ಯೋಜನೆಯಡಿಯಲ್ಲಿ 19784 ಕೆಲಸಗಳನ್ನು ಎನ್ ಆರ್ ಇಪಿ. ಹೆಚ್ಚುವರಿ ಕಾರ್ಯ ಯೋಜನೆಯಡಿಯಲ್ಲಿ ರೂಪಿಸಿದ್ದು ಅದರಲ್ಲಿ 6782 ಕೆಲಸಗಳನ್ನು ಪೂರ್ತಿ ಮಾಡಲಾಗಿದೆ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸಭಾಧ್ಯಕ್ಷರೇ, ನಾನು ಪ್ರಶ್ನೆಯನ್ನು ಕೇಳಿದ್ದಕ್ಕೆ, ಧಾರವಾಡ ಜಿಲ್ಲೆಯಲ್ಲಿ ಪರಿಹಾರ ಕಾಮಗಾರಿಗಳಿಗಾಗಿ ಎಷ್ಟೆಷ್ಟು ಖರ್ಚಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಇದಕ್ಕಾಗಿ 32 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಎಂದು ವಿವರಣೆಯನ್ನು ಕೊಟ್ಟಿದ್ದಾರೆ ಬರಗಾಲ ಕಾಮಗಾರಿಗಳಲ್ಲಿ ಅದರಲ್ಲೂ ಗ್ರಾಮೀಣ ನೀರು ಪೂರೈಕೆಗೆ 13.96 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಸ್ವಾಭಾವಿಕವಾಗಿ ಇದು ಬರಗಾಲ ಕಾಮಗಾರಿಗಳಲ್ಲಿ ಮಾಡತಕ್ಕದ್ದಲ್ಲ. ಪ್ರತಿಯೊಂದು ಹಳ್ಳಿಗಳಲ್ಲಿ ನೀರು ಪೂರೈಕೆ ಕೆಲಸಗಳಾಗಬೇಕು, ಆ ಹಣ ಬೇರೆ. ಮೂವತ್ತೆರಡು ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ಬರಗಾಲ ಪರಿಹಾರದ ಸಲುವಾಗಿ ಕೊಟ್ಟಿದ್ದಾರೆ. ಆದರೆ ಒಂದು ರಸ್ತೆ ನಿರ್ಮಾಣದ ಬಗ್ಗೆ, ಜನಗಳಿಗೆ ಆಹಾರ ಒದಗಿಸುವ ಬಗ್ಗೆ ಯಾವುದೇ ಕೆಲಸಗಳನ್ನು ಮಾಡಿಲ್ಲ ಮತ್ತು ಜನರಿಗೆ ಕೆಲಸಗಳನ್ನು ಕೊಡುವುದರ ಸಲುವಾಗಿ, ಪಶುವೈದ್ಯ ಕೆಲಸಕ್ಕೋಸ್ಕರವಿರುವ ಹಣವನ್ನು ಇದಕ್ಕೆ ಏತಕ್ಕೆ ಬಳಸುತ್ತೀರಿ, ದಯವಿಟ್ಟು ಸರಿಯಾದ ವಿವರಣೆಯನ್ನು ಮತ್ತು ಪ್ರತಿಯೊಂದು ಕಾರ್ಯಕ್ಕಾಗಿ ಎಷ್ಟೆಷ್ಟು ಹಣ ಧಾರವಾಡ ಜಿಲ್ಲೆಯಲ್ಲಿ ಖರ್ಚಾಗಿದೆ ಎನ್ನುವುದನ್ನು ಮಾನ್ಯಮಂತ್ರಿಯವರು ಸಭೆಯ ಮುಂದೆ ಇಡುತ್ತಾರೆಂದು ತಿಳಿಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸಭಾಪತಿಗಳೇ, ಮೊನ್ನೆ ದಿವಸ ನಾನು ಈ ಬರಗಾಲದ ಬಗ್ಗೆ ನಡೆದ ಚರ್ಚೆಯಲ್ಲಿ ಉತ್ತರ ಕೊಡುವಾಗ ಹೇಳಿದ್ದೆ. ಎನ್ ಆರ್ ಇ ಪಿ.ಗೆ ನಮ್ಮ ಯೋಜನೆಯಲ್ಲಿ ಒದಗಿಸಿದಂತಹ ಹಣ ಹೋದ ವರ್ಷ ಇಪ್ಪತ್ತು ಕೋಟಿ ರೂಪಾಯಿ. ನಾವು ಖರ್ಚು ಮಾಡಿರುವುದು ನಲವತ್ತೆರಡು ಕೋಟಿ ರೂಪಾಯಿಗಳು. ಇಪ್ಪತ್ತೆರಡು ಕೋಟಿ ರೂಪಾಯಿ ಹಣ ಹೆಚ್ಚು ಖರ್ಚು ಮಾಡಿದ್ದೇವೆ. ಆದು ಸ್ಕೇರ್ಸಿಟಿ ಇತ್ತೆಂದು ಖರ್ಚು ಮಾಡಿದ್ದೇವೆ. ಬರಗಾಲ ಇಲ್ಲದಿದ್ದರೆ ಇಪ್ಪತ್ತು ಕೋಟಿ ರೂಪಾಯಿ ಮಾತ್ರ ಖರ್ಚು ಮಾಡುತ್ತಿದ್ದೆವು. ಅಲ್ಲಿ ಬರಗಾಲ ಬಂದಿದ್ದರಿಂದ

ನಲವತೆರ್ಡು ಕೋಟಿ ರೂಪಾಯಿ ಹಣ ಹೆಚ್ಚು ಖರ್ಚು ಮಾಡಬೇಕಾಗಿ ಬಂತು. ಇಪ್ಪತ್ತೆರಡು ಕೋಟಿ ರೂಪಾಯಿ ಹೆಚ್ಚು ಖರ್ಚು ಮಾಡಿದ್ದು. ಸ್ಕೇರ್ಸಿಟಿ ಅಡಿಷನಲ್ ಎಫರ್ಟ್ಸ್‌ಗಾಗಿ ಮಾನ್ಯ ಮೊಯಿಲಿ ಯವರು ಅರ್ಥಮಂತ್ರಿಗಳಾಗಿದ್ದಾಗ ಸ್ಕೇರ್ಸಿಟಿ ರಿಲೀಫ್ ವರ್ಕ್ ಯಾವರೀತಿ ಕೈಗೊಳ್ಳಬೇಕು ಎನ್ನುವ ಬಗ್ಗೆ ಕೇಂದ್ರ ಸರ್ಕಾರದವರು ಒಂದು ಆದೇಶವನ್ನು ಕೊಟ್ಟಿದ್ದರು. ಏನೆಂದರೆ, ಯಾವುದೇ ಸ್ಕೇರ್ಸಿಟಿ ಕೆಲಸ ಆಗಲಿ ಅದು ಎನ್‌ಆರ್‌ಇಪಿ, ಡಿಪಿಎಪಿ, ಆರ್‌ಎಲ್‌ಬಿಪಿ. ಮೂಲಕವೇ ಪ್ಲಾನ್‌ನಲ್ಲಿ ಆಗಬೇಕು ಮತ್ತು ಯೋಜನಾಬದ್ಧವಾಗಿ ಕೆಲಸ ಮಾಡಬೇಕು ಎಂದು ಕೇಂದ್ರ ಸರ್ಕಾರದ ಆದೇಶದ ಪ್ರಕಾರ ಕೆಲಸ ಮಾಡದೇ ಇದ್ದರೆ ಕೇಂದ್ರ ಸರ್ಕಾರದವರು ಹಣ ಕೊಡುವುದಕ್ಕೆ ಒಪ್ಪುವುದಿಲ್ಲ. ಕೆಲಸವನ್ನು ಯಾರೇ ಮಾಡಿದರೂ ಅದು ದುರುಪಯೋಗವಾದ ಹಾಗೆ ಕೆಲಸವನ್ನು ಮಾಡಬೇಕು. ಕೆಲವೊಂದು ಸಮಯದಲ್ಲಿ ಮಾಡಿದಂಥ ಕೆಲಸಗಳು ವೇಸ್ಟ್ ಆಗುವುದನ್ನು ನೋಡಿದ ಮೇಲೆ ಅವರು ಈ ತೀರ್ಮಾನವನ್ನು ಕೈಗೊಂಡರು, ಬರಗಾಲದಲ್ಲಿ ಮಾಡಿದಂಥ ರಸ್ತೆಗಳು ಪಕ್ಕಾ ರಸ್ತೆಗಳು ಆಗುತ್ತಿರಲಿಲ್ಲ, ಕೇಂದ್ರ ಸರ್ಕಾರದವರು ಇವೆಲ್ಲವುಗಳ ಬಗ್ಗೆ ಒಂದು ನಿಯಮವನ್ನು ಮಾಡಿದೆ. ನಾವುಗಳು ಆ ನಿಯಮಗಳಿಗನುಸಾರವಾಗಿಯೇ ಕೆಲಸವನ್ನು ಮಾಡಬೇಕಾಗುತ್ತದೆ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಧಾರವಾಡ ಜಿಲ್ಲೆಯ ಕಾಮಗಾರಿಗಳ ಬಗ್ಗೆ ಹೇಳಿದರು. 185,34 ಲಕ್ಷ ರೂಪಾಯಿ ಅದಕ್ಕಾಗಿ ಖರ್ಚು ಮಾಡಿದ್ದೇವೆಂದು ತಿಳಿಸಿದ್ದಾರೆ. ಈ ಕಾಮಗಾರಿಗಳ ವಿವರಣೆ ಕೊಟ್ಟರೆ ಯಾವ ಯಾವ ತಾಲ್ಲೂಕಿನಲ್ಲಿ ಯಾವ ಯಾವ ಕೆಲಸಗಳು ನಡೆದಿವೆ ಎನ್ನುವುದು ನನಗೆ ಗೊತ್ತಾಗುತ್ತದೆ. ನನಗೆ ತಿಳಿದಮಟ್ಟಿಗೆ ಬರಗಾಲದ ಬಗ್ಗೆ ಯಾವ ಕೆಲಸವೂ ನಡೆದಿಲ್ಲ, ಇದು ಬರೀ ಕಾಗದದ ಮೇಲೆ ಖರ್ಚಾಗಿದೆಯೆಂದು ಕಾಣುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಯಾವ ಯಾವ ತಾಲ್ಲೂಕಿನಲ್ಲಿ ಯಾವ ಯಾವ ಕೆಲಸಗಳನ್ನು ತೆಗೆದುಕೊಂಡಿದ್ದೇವೆ ಎನ್ನುವ ವಿವರಣೆಯನ್ನು ಒದಗಿಸಿಕೊಡುತ್ತೇನೆ. ಡಿಡಿಸಿ. ಮೀಟಿಂಗ್‌ನಲ್ಲಿ ಈ ಎಲ್ಲಾ ವಿವರಣೆಯನ್ನು ಒದಗಿಸಿದ್ದೇವೆ. ಇಪ್ಪತ್ತು ಅಂಶದ ಕಾರ್ಯಕ್ರಮದ ಮೀಟಿಂಗ್‌ನಲ್ಲಿ ವಿವರಣೆ ಕೊಟ್ಟಿದ್ದೇನೆ. ಮತ್ತೆ ಬೇಕಾದರೆ ಮಾನ್ಯ ಸದಸ್ಯರಿಗೆ ನಾನು ಎಲ್ಲ ವಿವರಣೆಯನ್ನು ಒದಗಿಸಿ ಕೊಡುತ್ತೇನೆ.

Sub : Rentals and Taxes due from Excise contractors in the State for the years 1981-92 to 1983-84.

Qn. No. 81 (97) Sri M. Ramappa (Bellary).—Will the Minister of State for Excise be pleased to state :—

a) the total amount due from the Excise contractors towards rentals and taxes for the years 1981–82, 1982–83 and 1983–84 (District–wise figures may please be given) ;

b) the reasons for non–collection of due ?

Sri Ramesh Gigaginagi (The Hon'ble Minister of State for Excise).—

a) No taxes are outstanding. Thr amount of rental due are as follows ;

	Toddy	Arrack
1981–82	41,68,400	7,35,600
1982-83	3,20,000	86,45,920
1983-84	1,07,70,000	1 09,82,565

(District-wise details are indicated in the enclosed statement

b) Partly due to stay orders issued by Courts.